ಬಿ.ಎ. ಅಜರುದ್ದೀನ್, ಬಾಚಹಳ್ಳಿ

*ಲಕ್ಷ್ಮೀಶ ಕವಿಯ 'ಸುತನೆ ಸದ್ಗತಿದಾತನೈ" ಹೇಗೆ ರಾಮ್?*



ಸದ್ದು+ಗತಿ= ಸದ್ಗತಿ (ಕುವರ್ಣಸಂಧಿ) = ಸೌಂಡ್ ಟ್ರ್ಯಾಕ್; ಮ್ಯೂಸಿಕ್ ಸಿಸ್ಟಮ್ ಇಟ್ಟುಕೊಂಡ ಮಗನೇ ಸದ್ಗತಿದಾತ!

ಕೆ.ಎಂ. ವಿಭೂತಿ, ಹರಿಹರ

*ಅತ್ತೆ ಸೊಸೆಯರ ಕಾದಾಟವಿಲ್ಲದ ಯುಗಗಳು ಚರಿತ್ರೆಯಲ್ಲಿ ಬರಬಹುದೆ?*

ಈಗಲೇ ಇದೆಯಲ್ಲ! ಪ್ರಪಂಚದ ಮೊಟ್ಟಮೊದಲ ಅತ್ತೆ ಸೊಸೆ– ಲಕ್ಷ್ಮಿ, ಸರಸ್ವತಿ – ಪ್ರೈವೇಟ್ ಸ್ಕೂಲ್‌ಗಳಲ್ಲಿ ಅನ್ಯೋನ್ಯವಾಗಿದ್ದಾರೆ.

ಜಾಕೋಬ್ ಡಿಸೋಜ, ಕುರುವಳ್ಳಿ

*ಜಗಳಕ್ಕೂ, ಹೋರಾಟಕ್ಕೂ ಇರುವ ವ್ಯತ್ಯಾಸವೇನು?*

ಪಕ್ಷದವರೇ ಕಿತ್ತಾಡಿದರೆ ಜಗಳ; ವಿರೋಧ ಪಕ್ಷದವರೊಡನೆ ಕಿತ್ತಾಡಿದರೆ ಹೋರಾಟ.

ಮಹಾಲಿಂಗಪ್ಪ ಗೋರಬಾಳ, ಮಾಣಿಕವಾಡಿ

*ಇತ್ತೀಚೆಗೆ ಮನುಷ್ಯರಿಗೆ ಬಿಪಿ, ಸಕ್ಕರೆ ಖಾಯಿಲೆ ಹೆಚ್ಚಾಗಲು ಕಾರಣ?*



ಮೇಕ್ ಇನ್ ಇಂಡಿಯಾ ದಂತೆಯೇ ಮೇಕ್ ಇನ್ ಶರೀರ ಸ್ಕೀಮ್‌ನಲ್ಲಿ ತಮ್ಮತಮ್ಮ ಸಕ್ಕರೆ, ಉಪ್ಪು ಉತ್ಪಾದಿಸಿಕೊಳ್ಳುವ ಬಯಕೆ!

ರಾಜು ಎಸ್. ಗಾಲಿ, ಅಥಣಿ

*ರೈತರ ಹೆಸರಿನಲ್ಲಿ ಅಧಿಕಾರ ಹಿಡಿಯುವ ಸರ್ಕಾರಗಳು ರೈತರ ಬೆನ್ನೆಲುಬು ಮುರಿಯುತ್ತಿವೆಯಲ್ಲಾ, ಇದು ಸರಿಯೆ?*

ಅಲ್ಲಿರುವವರೆಲ್ಲ ಮಣ್ಣಿನ, ರೈತರ ಮಕ್ಕಳಲ್ಲವೆ! ಮಕ್ಕಳು ಅಪ್ಪನ ಹಿತ ಹಾಳು ಮಾಡುವುದು ಸಮ್ಮತ ಪರಂಪರೆ!

ಹಾಡ್ಯ ಬ. ಜಯಾನಂದ, ಮೈಸೂರು

*ಮೂರ್ಖರಿಗೆ ಗೊಂದಲವಿರುವುದಿಲ್ಲವಂತೆ. ಬುದ್ಧಿಜೀವಿಗಳ ಗೊಂದಲವೇ ಎಲ್ಲ ಸಮಸ್ಯೆಗೂ ಕಾರಣವಂತೆ. ಏನಂತೀರಿ?*

ಮೂರ್ಖರು ಬುದ್ಧಿಜೀವಿಗಳಿಗಿಂತ ಜಾಣರು ಅಂತೀನಿ.

ಬಸವಣ್ಣ ಹೊನಖಾಂಡೆ, ಬಸವನಬಾಗೇವಾಡಿ

*ಅತಿ ಪ್ರಾಮಾಣಿಕ ವ್ಯಕ್ತಿಗೆ ಕಾನೂನು-ಕಟ್ಟಳೆ ಏಕೆ ಬೇಕು?*

ಚಕ್ಕುಬಂದಿ ಪರೀಕ್ಷಿಸಿಕೊಳ್ಳಲು!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ನ್ಯಾಯಬೆಲೆ ಅಂಗಡಿಯ ಮುಂದೆ ಇರುವುದಕ್ಕಿಂತ ಸಾರಾಯಿ ಅಂಗಡಿಯ ಮುಂದೆ ಜನ ಜಾಸ್ತಿ. ಏಕೆ?*

ಹಾಗೇನಿಲ್ಲ; ನ್ಯಾಯಬೆಲೆ ಅಂಗಡಿಗೆ ಬಂದವರು ಹಿಂತಿರುಗುವ ಪರಿಸ್ಥಿತಿಯಲ್ಲಿ ಇರುತ್ತಾರಾದ್ದರಿಂದ ಹೋಗಿರುತ್ತಾರಷ್ಟೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಒಂದು ನಿಮಿಷ ಕಣ್ಮುಚ್ಚಿಕೊಂಡು ಹೆತ್ತಮ್ಮನ ಮುಖದ ವಿವರ ಹೇಳಲಾಗದವರು ನಟಿಯೊಬ್ಬಳ ಸಕಲ ವಿವರ ಹೇಳುವರಲ್ಲ...?*

ನಿಮ್ಮದೇ ಮೂಗಿನ ವಿವರ ಹೇಳಿ ನೋಡೋಣ; ವಸ್ತು ಸನಿಹವಿದ್ದಷ್ಟೂ ವಿವರ ವಿರಳ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು

*ವೃದ್ಧಾಪ್ಯವನ್ನು ಬೇಡವೆಂದು ತಿರಸ್ಕರಿಸಬಹುದೆ?*

ಕಥೆಯಾಗಿ ಬದುಕುವವರು ಕಿರಿಯರಿಗೆ ನಿಘಂಟು ಆಗುವ ಸ್ಥಿತಿಯೇ ವೃದ್ಧಾಪ್ಯ; ಜೀವನದಲ್ಲಿ ಅರ್ಥ ಇರಲಿ.

ಸುಮಾ ರಮೇಶ್, ಹಾಸನ

*ವಿಚ್ಛೇದನದ ಕಾನೂನು ಕರುಳು ಸಂಬಂಧಕ್ಕೂ ಅನ್ವಯಿಸುವಂತಿದ್ದರೆ?*

ಕುಂತಿ ಕರ್ಣನನ್ನು ದೂರ ಮಾಡಿದ್ದು ಅದೇ ಕಾನೂನಿನ ಅಡಿಯಲ್ಲಿ; ಬರಹದಲ್ಲಿಲ್ಲದಿದ್ದರೂ ಅನುಷ್ಠಾನದಲ್ಲಿರುವ ಕಾನೂನು ಅದು.

ಎಸ್.ಸಿ. ರಮೇಶ್, ಮೈಸೂರು

*ನಟ-ನಟಿಯರೆಲ್ಲ ಎರಡು-ಮೂರನೆಯ ಸಂಬಂಧದ ಮದುವೆಗಳನ್ನು ಆಯ್ಕೆ ಮಾಡಿಕೊಳ್ಳಲು ಕಾರಣ?*

ಪತಿ/ಸತಿ ಪಾತ್ರದಲ್ಲಿ ಅಭಿನಯಿಸಿದ ನೈಜ ಅನುಭವ ಇರುವವರಿಗೆ ಆದ್ಯತೆ ನೀಡುವ ಗುಣ.

## ಬಹುಮಾನಿತ ಪ್ರಶ್ನೆ

ಸುಶೀಲಾ ರಾಮಣ್ಣ, ಬೆಂಗಳೂರು

*ಗಂಡಹೆಂಡಿರ ಜಗಳ ಉಂಡು ಮಲಗುವ ತನಕ ಎಂಬ ನಾಣ್ಣುಡಿ ಲಿವಿಂಗ್ ಟುಗೆದರ್ ಸಂಸ್ಕೃತಿಗೂ ಅನ್ವಯ ಆಗುತ್ತಾ?*

ಊಹೂಂ; ಅದಕ್ಕೆ ಬೇರೆಯೇ ನಾಣ್ಣುಡಿ; ಲಿವಿಂಗ್ ಟುಗೆದರ್‌ನ ಸರಸ ಮದುವೆ ಆಗುವ ತನಕ!

ಅಮರಯ್ಯಾ ಪತ್ರಿಮಠ, ಸುರಪೂರ

*ವಿದ್ಯೆಗೂ, ಬುದ್ಧಿಗೂ ಇರುವ ಅಂತರವೇನು?*

ವಿದ್ಯೆ ಯೂಸರ್ ನೇಮ್; ಬುದ್ಧಿ ಪಾಸ್‌ವರ್ಡ್.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಆಡಂಬರ! ಇದರ ನಿಜವಾದ ಅರ್ಥ?*

ಆಡಮ್‌ನಂತೆ ಸೇಬು ತಿಂದುಕೊಂಡು, ಸೊಪ್ಪಿನ ಡ್ರೆಸ್ ಧರಿಸಿ, ಇದ್ದುದರಲ್ಲೇ ಸಂತೋಷದಿಂದಿರುವ ಗುಣದ ಬರವೇ ಆಡಂಬರ!

ವಿ. ಹೇಮಂತಕುಮಾರ್, ಬೆಂಗಳೂರು

*ಅಲುಗಾಡುತ್ತಿರುವ ಹಲ್ಲನ್ನು ನಾಲಗೆ ಸವರುತ್ತಲೇ ಇರುತ್ತೆ. ಏಕೆ?*

ಆಸ್ಪತ್ರೆ ನಿಯಮ; ಗೊಟಕ್ ಎನ್ನುವುದು ಖಾತ್ರಿಯಾದಾಗ ಐಸಿಯೂ ಮುಂದೆ ನೂಕುನುಗ್ಗಲು!

ಆರತಿ ಘಟಿಕಾರ್, ದುಬೈ

*ರೋಮಾಂಚಕಾರಿ ಪತ್ತೇದಾರಿ ಎನ್ನುವ ತಲೆಬರಹವಿರುವ ಪುಸ್ತಕ ಓದಲು ಶುರು ಮಾಡಿದೊಡನೆ ನಿದ್ರೆಗೆ ಜಾರಿಬಿಡುತ್ತೇನಲ್ಲ...?*



ಮಂಪರಿನ ಕಣ್ಣಿಗೆ ಅದು 'ರೋ (ಸಾಲುಸಾಲು) ಮಂಚ ಖಾಲಿ, ಮತ್ತೇಕೆ ಕಾದಿರಿ' ಎಂದು ಕಾಣಿಸುವುದೇ ಕಾರಣವಂತೆ!

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ

*ಈಗಿನ ಗಂಡಸರು ಗುರುಗಳು, ತಂದೆತಾಯಿಗಳು ಕಲಿಸದ ವಿದ್ಯೆಯನ್ನು ಪತ್ನಿಯಿಂದ ಕಲಿಯುತ್ತಿದ್ದಾರಲ್ಲಾ....?*

ಓ! ಅಡಿಗೆಯ ಬಗ್ಗೆ ನೀವು ಹೇಳುತ್ತಿರುವುದು; ಅವಳ ಟೇಸ್ಟ್‌ಗೆ ತಕ್ಕಂತೆ ಇರಬೇಕಾದ್ದರಿಂದ ಅವಳಿಂದ ಕಲಿಯುವುದೇ ಸರಿ.

■ ರಾಮ್